## ಧರ್ಮ: ನಮ್ಮ ಸ್ವಭಾವ

ಧಾರ್ಮಿಕ ಮತ್ತು ಆಧ್ಯಾತ್ಮಿಕ ನಂಬಿಕೆ ಮಾನವನ ಸ್ವಭಾವದಲ್ಲಿಯೇ ಇದೆ ಎಂದೆನಿಸುತ್ತದೆ. ಪ್ರಪಂಚದ ಎಲ್ಲ ಜನಾಂಗಗಳಲ್ಲೂ, ಅತ್ಯಂತ ಪುರಾತನ ಕಾಲದಿಂದಲೂ, ಒಂದಲ್ಲ ಒಂದು ಬಗೆಯ ಧಾರ್ಮಿಕ ನಂಬಿಕೆಯನ್ನು ಕಾಣುತ್ತೇವೆ. ಎಷ್ಟೇ ಸಾಮಾಜಿಕ ಮತ್ತು ರಾಜಕೀಯ ಒತ್ತಡಗಳಿದ್ದರೂ, ಅದು ಕೆಲವು ಕಾಲ ಸುಪ್ತಾವಸ್ಥೆಯಲ್ಲಿ ಉಳಿದರೂ ಮತ್ತೆ ಅದು ತಲೆ ಎತ್ತುವುದನ್ನು ನೋಡುತ್ತೇವೆ. ಮಿದುಳಿನಲ್ಲಿ ದೇವರಿಗೆ ಸಂಬಂಧಪಟ್ಟ ಒಂದು ಕೇಂದ್ರ(God module)ವಿದೆಯೆಂದು ವಿಜ್ಞಾನಿಗಳು ಹೇಳುತ್ತಾರೆ. ಈ ಕೇಂದ್ರವೇ ಧಾರ್ಮಿಕ ನಂಬಿಕೆಗೆ ಕಾರಣವೆಂಬುದು ಅವರ ಅಭಿಮತ. ಹೀಗೆ ಧಾರ್ಮಿಕ ನಂಬಿಕೆಯೆಂಬುದು ಮನುಷ್ಯ ಸ್ವಭಾವದ ಒಂದು ಅಂಗವಾಗಿರುವುದರಿಂದ ಅದನ್ನು ನಿರ್ಮೂಲ ಗೊಳಿಸಲು ಆಗುವುದಿಲ್ಲವೆಂದು ಕಂಡುಬರುತ್ತದೆ.

ಇತ್ತೀಚೆಗೆ ಚೀನಾದಲ್ಲಿ ನಡೆದ ಸಂಗತಿಯೂ ಇದನ್ನೇ ಸಮರ್ಥಿಸುತ್ತದೆ. ಧರ್ಮಕ್ಕೆ ವಿರೋಧಿಯಾದ ಅಲ್ಲಿಯ ಕಮ್ಯುನಿಸ್ಟ್ ಸರ್ಕಾರವು ಧಾರ್ಮಿಕ ನಂಬಿಕೆಯನ್ನು ಮನುಷ್ಯನಂತರಾಳದಿಂದ ತೊಡೆದು ಹಾಕಲು ಶತಪ್ರಯತ್ನ ಮಾಡುತ್ತಿದೆ. ಫಲುನ್ ಗಾಂಗ್ (Falun Gong) ಧಾರ್ಮಿಕ ಪಂಗಡವು ಅಲ್ಲಿ ಹುಟ್ಟಿಕೊಂಡು, ಇಂತಹ ವಿರುದ್ಧ ವಾತಾವರಣದಲ್ಲಿಯೂ ಹುಟ್ಟಿದ ಏಳೇ ವರ್ಷಗಳಲ್ಲಿ ಹತ್ತು ಕೋಟಿ ಅನುಯಾಯಿಗಳನ್ನು ಅದು ಪಡೆಯಿತು. ಅದರ ನಾಯಕ ಲಿ ಹೊಂಗಜಿ ವಿದೇಶದಲ್ಲಿರುವನು. ಅವರ ಸಾಧನಾ ವಿಧಾನದ ಹೆಸರು ಕ್ವಿಗಾಂಗ್. ಇದೊಂದು ಸರಳವಾದ ಉಸಿರಾಟದ ವಿಧಾನ. ಇದರಿಂದ ಮನಶ್ಶಾಂತಿ ಆನಂದ ಉಂಟಾಗುತ್ತದೆಯಲ್ಲದೆ ದೈಹಿಕ ಆರೋಗ್ಯವೂ ಉತ್ತಮಗೊಳ್ಳುತ್ತದೆಯಂತೆ. ಇದು ಹಣವೇ ಪ್ರಧಾನವಾದ ಭೌತಿಕ ಸಂಸ್ಕೃತಿಯ ಅತಿರೇಕದಿಂದ ದೂರ ವಿರುವುದಕ್ಕೆ ಸಹಾಯ ಮಾಡುತ್ತದೆ.

ಕಮ್ಯುನಿಸ್ಟ್ ಸರ್ಕಾರವು ಈಗ ಈ ಚಳುವಳಿಯನ್ನು ಹತ್ತಿಕ್ಕುತ್ತಿದೆ. ಸರ್ಕಾರ ಈ ಚಳುವಳಿಗೆ ಬಹಿಷ್ಕಾರ ಹಾಕಿ, ಅದಕ್ಕೆ ಸಂಬಂಧಪಟ್ಟ ಲಕ್ಷಗಟ್ಟಲೆ ಪುಸ್ತಕಗಳು ಮತ್ತು ಕ್ಯಾಸೆಟ್ಟುಗಳನ್ನು ಧ್ವಂಸಮಾಡಿತು ಮತ್ತು ಸಾವಿರಾರು ಅನುಯಾಯಿಗಳನ್ನು ಸೆರೆಹಿಡಿದು ಅವರ ಮನಃಪರಿವರ್ತನೆಗೆ ಬೇರೆ ಕಡೆ ಕಳಿಸಿತು. ಈ ಚಳುವಳಿ ದೇಶಕ್ಕೆ ದೊಡ್ಡ ಆತಂಕಪ್ರಾಯವೆಂದು ಸರ್ಕಾರ ಪರಿಗಣಿಸುತ್ತಿದೆ.

## ಕುಟುಂಬಜೀವನದ ಪ್ರಾಮುಖ್ಯ

ಅಮೇರಿಕದಲ್ಲಿ ಜಾನ್ ಎಫ್. ಕೆನಡಿ ತೀರಿಕೊಂಡಾಗ ಬಹುತೇಕ ಅಮೇರಿಕನ್ನರು ವೈಯಕ್ತಿಕ ನಷ್ಟವನ್ನು ಅನುಭವಿಸಿದರು. ಭಾರತದಲ್ಲಿಯೂ ಎಂ.ಜಿ. ರಾಮಚಂದ್ರನ್ ತೀರಿಕೊಂಡಾಗಲೂ ಲಕ್ಷಾಂತರ ಜನರು ಕಣ್ಣೀರು ಸುರಿಸಿದರು. ತಮ್ಮ ಹತ್ತಿರದ ಸಂಬಂಧಿಕರು ತೀರಿಕೊಂಡಾಗಲೂ ಇಷ್ಟೊಂದು ದುಃಖಿಕ್ಕೊಳಗಾಗದ ಜನರು ಯಾರೊ ಪ್ರಮುಖ ವ್ಯಕ್ತಿಗಳು ತೀರಿಕೊಂಡಾಗ ಈ ರೀತಿ ನಷ್ಟವನ್ನು ಅನುಭವಿಸುವುದಕ್ಕೆ ಕಾರಣವೇನು — ಎಂದು ಕೇಳುತ್ತಾರೆ ಮೈಕೇಲ್ ಲೆಮೊನಿಕ್,ಟೈಮ್ (TIME) ಪತ್ರಿಕೆಯಲ್ಲಿ. ಇಂದಿನ ವಿಜ್ಞಾನ ಮತ್ತು ತಾಂತ್ರಿಕತೆಯ ಪರಿಣಾಮವಾಗಿ ಹಾಗೂ ವಾಣಿಜ್ಯ ಮನೋಭಾವದ ಪ್ರಭಾವದಿಂದಾಗಿ ಕೌಟುಂಬಿಕ ಸಂಬಂಧ ಸಡಿಲವಾಗುತ್ತಿವೆ. ಕುಟುಂಬಗಳು ಒಡೆದು ಹೋಗುತ್ತಿವೆ, ಪರಸ್ಪರ ಪ್ರೀತಿ ಬಾಂಧವ್ಯ ನಶಿಸಿಹೋಗುತ್ತಿದೆ. ತಮ್ಮ ಹತ್ತಿರದವರ ಸಂಬಂಧ ವಿಲ್ಲದಿರುವುದರಿಂದ ಯಾವುದೊ ಪ್ರಸಿದ್ಧವ್ಯಕ್ತಿಯೊಡನೆ ತಮ್ಮನ್ನು ಸಂಬಂಧಿಸಿಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿದೆಯೆಂದು ಲೆಮೊನಿಕ್ ಅಭಿಪ್ರಾಯ ಪಡುತ್ತಾರೆ.

ಕಲೆತು ಬಾಳುವುದು ಆರೋಗ್ಯಕರ ಜೀವನಕ್ಕೆ, ಮಾನಸಿಕ ಸ್ವಾಸ್ಥ್ಯಕ್ಕೆ ಆವಶ್ಯಕ. ಡ್ಯೂಕ್ ವಿಶ್ವವಿದ್ಯಾಲಯದ ಸಂಶೋಧಕರ ವರದಿಯ ಪ್ರಕಾರ ಸಾಪ್ತಾಹಿಕ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ವೃದ್ಧರು ಹೆಚ್ಚು ಕಾಲ ಬದುಕುತ್ತಾರೆ, ಇದಕ್ಕೆ ಕಾರಣ ಅವರಿಗೆ ಸಿಕ್ಕುವ ಸಾಮಾಜಿಕ ಬೆಂಬಲ. ವಿಶಾಲ ಸಮಾಜದೊಡನೆ ತಮ್ಮನ್ನು ಒಂದಾಗಿಸಿಕೊಳ್ಳುವುದರಿಂದ ಮಾನಸಿಕ ಕುಸಿತದಿಂದ ಅವರು ಪಾರಾಗುತ್ತಾರೆ. ಭಾರತದಲ್ಲಿಯೂ ಇತ್ತೀಚೆಗೆ ಪೂಜೆ, ಹೋಮ, ಧಾರ್ಮಿಕ ಉತ್ಸವಗಳು, ದೇವಸ್ಥಾನಗಳು — ಮುಂತಾದ ಸಾಮೂಹಿಕ ಧಾರ್ಮಿಕತೆಯು ಹೆಚ್ಚು ಜನಪ್ರಿಯ ವಾಗುತ್ತಿರುವುದಕ್ಕೆ ನಶಿಸಿಹೋಗುತ್ತಿರುವ ಕೌಟುಂಬಿಕ ಮೌಲ್ಯಗಳೇ ಕಾರಣವಿರಬಹುದು. ತಮ್ಮ ಮನೆಯಲ್ಲಿ ಸಿಗದ ಭಾವನಾತ್ಮಕ ಬೆಂಬಲವನ್ನು ಸಾಮೂಹಿಕ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಡೆಯಲು ಅವರು ಪ್ರಯತ್ನಿಸುತ್ತಾರೆ. ಆದರೆ ಇದು ಕೌಟುಂಬಿಕ ಮೌಲ್ಯದ ಸ್ಥಾನವನ್ನು ತುಂಬಲಾರದು. ದುರಂತದ ಸಮಯದಲ್ಲಿ ಕುಟುಂಬವೊಂದೇ ನಿಜವಾದ ಆಶ್ರಯ. ಆಗ ಕೆನಡಿಯಾಗಲಿ, ರಾಮಚಂದ್ರನ್ ಆಗಲಿ, ಸಾಮೂಹಿಕ ಧರ್ಮವಾಗಲಿ ನಮಗೆ ಸಮಾಧಾನ ನೀಡಲು ಬರುವುದಿಲ್ಲ.